ದಿ:6.07.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ ಶ್ರೀ ಪಿ.ವಿ.ಜೆಡ್. ವಕೀಲರಿಂದ ,**

1. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ಈ ದಾವೆಯನ್ನು ಯಾರು ಯಾರ ವಿರುದ್ಧ ಹೂಡಿರುತ್ತಾರೆ ನನಗೆ ತಿಳಿದಿರುತ್ತದೆ. ಈ ದಾವೆಯನ್ನು ಕರೀಂ ಸಾಬ್ ರವರು ತಿಪ್ಪೋಜಿರಾವ್ ರವರ ವಿರುದ್ಧ ಹೂಡಿರುತ್ತಾರೆ. ಸದರಿ ಕರೀಂ ಸಾಬ್ ಏನು ಪರಿಹಾರ ಕೋರಿ ದಾವೆ ಹೂಡಿರುತ್ತಾರೆ ನನಗೆ ತಿಳಿದಿಲ್ಲ.

2. ತಿಪ್ಪೋಜಿರಾವ್ ರವರು ಸದರಿ ಕರೀಂ ಸಾಬ್ ರವರ ವಿರುದ್ಧ ಈ ನ್ಯಾಯಾಲಯದಲ್ಲಿ ಯಾವುದೇ ದಾವೆ ಹೂಡಿದ ಬಗ್ಗೆ ನನಗೆ ತಿಳಿದಿಲ್ಲ. ಅವರು ಏನು ಪರಿಹಾರ ಕೋರಿ ಏನು ದಾವೆ ಹೂಡಿರುತ್ತಾರೆ ನನಗೆ ತಿಳಿದಿಲ್ಲ. ಮೃತ ಕರೀಂ ಸಾಬ್ ನನಗೆ ಸುಮಾರು 35 ವರ್ಷಗಳಿಂದ ಪರಿಚಯ. ಅದರಂತೆ ತಿಪ್ಪೋಜಿರಾವ್ ಹಾಗೂ ಆತನ ಪತ್ನಿ ಸಹ ನನಗೆ ಸುಮಾರು 35 ವರ್ಷಗಳಿಂದ ಪರಿಚಯ. ನಾವು ಎಲ್ಲಾ ಒಂದೇ ಊರಿನವರು. ಸದರಿ ಕರೀಂ ಸಾಬ್ ಸುಮಾರು 1 ವರ್ಷಗಳ ಹಿಂದೆ ಮೃತ ಪಟ್ಟಿರುತ್ತಾರೆ. ಆತ ಸುಮಾರು 2 ವರ್ಷಗಳ ಹಿಂದೆ ಮೃತ ಪಟ್ಟಿರುತ್ತಾರೆ ಎಂದರೆ ಇರಬಹುದು. ಆತನ ಬಗ್ಗೆ ನನಗೆ ಏನು ತಿಳಿದಿಲ್ಲ ಎಂದರೆ ಸರಿಯಲ್ಲ. ಮೃತ ಕರೀಂ ಸಾಬ್ ರವರಿಗೆ ಮನೆ ಹಾಗೂ ನಿವೇಶನ ಹೊರತು ಪಡಿಸಿ ಬೇರೆ ಸ್ವತ್ತುಗಳು ಇರಲಿಲ್ಲ. ಸದರಿ ಸಂಗತಿಗಳನ್ನು ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ.

3. ಸದರಿ ತಿಪ್ಪೋಜಿರಾವ್ ಹಾಗೂ ಆತನ ಪತ್ನಿಗೆ ಆರೋಗ್ಯದ ಸಮಸ್ಯೆ ಇರುತ್ತದೆ ಎಂದರೆ ಸರಿ. ಅವರ ಹೊಲ ಮನೆ ಕೆಲಸಗಳನ್ನು ಅವರೇ ಮಾಡಿಕೊಳ್ಳುತ್ತಾರೆ. ದಾವಾ ಸ್ವತ್ತಿಗೆ ಬೇಲಿ ಹಾಕಿರುವುದಿಲ್ಲ. ದಾವಾ ಜಮೀನಿನಲ್ಲಿ ಕೊಳವೆ ಬಾವಿ ಇದೆಯೇ ಇಲ್ಲವೇ ನನಗೆ ತಿಳಿದಿಲ್ಲ. ಸದರಿ ತಿಪ್ಪೋಜಿರಾವ್ ರವರು ದಾವಾ ಜಮೀನಿನ ಮಣ್ಣಿನ ಮಟ್ಟ ಮಾಡಿ ಹಳ್ಳಗಳನ್ನು ಮುಚ್ಚಿ ವ್ಯವಸಾಯ ಯೋಗ್ಯ ಮಾಡಿ ಅಭಿವೃದ್ಧಿ

ಮಾಡಿರುತ್ತಾರೆ. ನಿಪಿ 3 ಹಾಗೂ ನಿಪಿ 4 ರಲ್ಲಿ ಕ್ರಯದ ಎಲ್ಲಾ ಒಡಂಬಡಿಕೆಗಳನ್ನು ನಮೂದಿಸಲಾಗಿದೆ ಎಂದರೆ ಸರಿ. ನಿಪಿ 3 ಹಾಗೂ 4 ರಲ್ಲಿ ಕ್ರಯದ ಸ್ವತ್ತಿನ ಸ್ವಾಧೀನವನ್ನು ತಿಪ್ಪೋಜಿರಾವ್ ರವರಿಗೆ ನೀಡಿದ ಬಗ್ಗೆ ನಮೂದು ಇಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಕರಾರು ಆದ ನಂತರ ತಿಪ್ಪೋಜಿರಾವ್ ರವರು ಸಂಪೂರ್ಣ ಕ್ರಯದ ಮೊಬಲಗಾದ ರೂ. 6,20,000/- ವನ್ನು ಮೃತ ಕರೀಂ ಸಾಬ್ ರವರಿಗೆ ನೀಡಿ ದಾವಾ ಸ್ವತ್ತಿನ ಸ್ವಾಧೀನ ಪಡೆದಿರುತ್ತಾರೆ. ಸದರಿ ಸಮಯದಲ್ಲಿ ದಾವಾ ಜಮೀನು 3 ಎಕರೆ 15 ಗುಂಟೆ ಇರುವುದಾಗಿ ಕಂಡು ಬಂದಿದ್ದು ಸದರಿ ಹೆಚ್ಚುವರಿ 15 ಗುಂಟೆ ಜಮೀನಿಗೆ ಪಂಚಾಯತಿದಾರರು ಹೆಚ್ಚುವರಿಯಾಗಿ ರೂ. 50,000/- ಕ್ರಯದ ಮೊಬಲಗನ್ನು ನಿಗಧಿ ಪಡಿಸಿದ್ದು ಸದರಿ ಮೊತ್ತವನ್ನು ತಿಪ್ಪೋಜಿರಾವ್ ಮೃತ ಕರೀಂ ಸಾಬ್ ರವರಿಗೆ ನೀಡಿ ಅದೇ ದಿವಸ ದಾವಾ ಸ್ವತ್ತಿನ ಸ್ವಾಧೀನ ಪಡೆದಿರುತ್ತಾರೆ. ಸದರಿ ವ್ಯವಹಾರ ಆದ ದಿನಾಂಕ ನನಗೆ ನಿಖರವಾಗಿ ನೆನಪಿಲ್ಲ.

4. ನಿಪಿ 3 ರಲ್ಲಿನ ಷರಾದಲ್ಲಿ ಸ್ವಾಧೀನ ಹಸ್ತಾಂತರ ಆದ ಬಗ್ಗೆ ನಮೂದಿಸಿಲ್ಲ ಎಂದರೆ ಸರಿ. ನಂತರದಲ್ಲಿ ಆದ ಕರಾರಿನಲ್ಲಿ ಸಹ ದಾವಾ ಸ್ವತ್ತಿನ ಸ್ವಾಧೀನ ಪಡೆದ ಬಗ್ಗೆ ನಮೂದು ಇಲ್ಲ ಎಂದರೆ ಸರಿ. 2 ನೇ ಕರಾರು ಆದ ಸಮಯದಲ್ಲಿ ಕ್ರಯದ ಮೊತ್ತ ರೂ. ಒಂದು ಲಕ್ಷ ಬಾಕಿ ಇತ್ತು. ಸದರಿ ತಿಪ್ಪೋಜಿರಾವ್ ಸಂಪೂರ್ಣ ಕ್ರಯದ ಹಣವನ್ನು ಪಾವತಿ ಮಾಡದ ಕಾರಣ ದಾವಾ ಸ್ವತ್ತಿನ ಸ್ವಾಧೀನವನ್ನು ಅವರಿಗೆ ನೀಡಿರಲಿಲ್ಲ ಎಂದರೆ ಸರಿಯಲ್ಲ. ಆ ಕಾರಣ ನಿಪಿ 3 ಹಾಗೂ 4 ರಲ್ಲಿ ಆ ಬಗ್ಗೆ ನಮೂದು ಇಲ್ಲ ಎಂದರೆ ಸರಿಯಲ್ಲ.

5. ಒ.ಎಸ್ 49/2018 ದಾವೆ ಹೂಡುವ ಪೂರ್ವದಲ್ಲಿ ವಾದಿ ಪ್ರತಿವಾದಿಯರಿಗೆ ನೋಟೀಸು ನೀಡಿದ ಸಂಗತಿ ನನಗೆ ತಿಳಿದಿಲ್ಲ. 2 ನೇ ಕರಾರು ಆದ ಸಮಯದಲ್ಲಿ ತಿಪ್ಪೋಜಿರಾವ್ ರವರು ಕರೀಂ ಸಾಬ್ ರವರಿಗೆ ರೂ. 5,20,000/- ಹಣ ನೀಡಿರುತ್ತಾರೆ. ನಿಪಿ 4 ರಲ್ಲಿ ಒಟ್ಟು ಮುಂಗಡ ಹಣ ರೂ. 6,20,000/- ಪಾವತಿ

ಆದ ಬಗ್ಗೆ ನಮೂದು ಇರುತ್ತದೆ. ನಿಪಿ 4 ರಲ್ಲಿ ಕರಾರು ಆದ ದಿವಸ ವಾದಿ ಪ್ರತಿವಾದಿಯರಿಗೆ ರೂ. 6,20,000/- ಹಣ ನೀಡಿರುತ್ತಾರೆ ಎಂದು ನಮೂದು ಆಗಿರುತ್ತದೆ ಎಂದರೆ ಸಾಕ್ಷಿ ಒಟ್ಟು ಮುಂಗಡ ಹಣ ರೂ. 6,20,000/- ಆಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಸಂಗತಿಯನ್ನು ನಿಖರವಾಗಿ ನಿಪಿ 4 ರಲ್ಲಿ ನಮೂದಿಸಿಲ್ಲ ಎಂದರೆ ಸರಿ.

6. ನಿಪಿ 3 ಹಾಗೂ 4 ಬರೆಯುವ ಸಮಯದಲ್ಲಿ ದಾವಾ ಸ್ವತ್ತಿನ ದಾಖಲೆಗಳನ್ನು ನಾನು ನೋಡಿರುವುದಿಲ್ಲ. ದಾವಾ ಸ್ವತ್ತನ್ನು 15 ವರ್ಷಗಳ ಕಾಲ ಪರಭಾರೆ ಮಾಡದಂತೆ ನಿರ್ಬಂಧ ಇತ್ತು ಎಂದರೆ ನನಗೆ ತಿಳಿದಿಲ್ಲ. ಆ ಬಗ್ಗೆ ಕರಾರಿನಲ್ಲಿ ನಮೂದು ಇದೆಯೇ ಇಲ್ಲವೇ ನನಗೆ ತಿಳಿದಿಲ್ಲ. ಕರಾರಿನಲ್ಲಿ ಕ್ರಯ ಪತ್ರ ಪಡೆಯಲು ಏನು ವಾಯಿದೆ ನಿಗಧಿಪಡಿಸಲಾಗಿತ್ತು ನನಗೆ ತಿಳಿದಿಲ್ಲ. ನಿಪಿ 5 ನೋಟೀಸು ನೀಡುವ ಪೂರ್ವದಲ್ಲಿ ತಿಪ್ಪೋಜಿರಾವ್ ರವರು ಪ್ರತಿವಾದಿಯರಿಗೆ ಬೇರೆಯಾವುದೇ ನೋಟೀಸು ನೀಡಿದ ಬಗ್ಗೆ ನನಗೆ ತಿಳಿದಿಲ್ಲ. ದಾವಾ ಸ್ವತ್ತಿನ ವಿಸ್ತೀರ್ಣ 15 ಗುಂಟೆ ಹೆಚ್ಚುವರಿ ಇರುವ ಬಗ್ಗೆ ಪ್ರತಿವಾದಿಯರು ವಾದಿ ಬಳಿ ಹೆಚ್ಚುವರಿ ರೂ. 50,000/- ಹಣ ಪಡೆದ ಸಮಯದಲ್ಲಿ ತಿಳಿದಿರುತ್ತದೆ. ಸದರಿ ಸಂಗತಿ 2013 ರಲ್ಲಿ ಜರುಗಿರುತ್ತದೆ. ಕರಾರಿನ ಅವಧಿ ಮುಗಿದ ನಂತರ ವಾದಿ ಕ್ರಯ ಪತ್ರ ಪಡೆಯಲು ದಾಸ್ತಾವೇಜು ಖರೀದಿಸಿದ ಬಗ್ಗೆ ನನಗೆ ತಿಳಿದಿಲ್ಲ. ಅದರಂತೆ ವಾದಿ ಉಪನೊಂದಣಾಧಿಕಾರಿ ಕಚೇರಿಯಲ್ಲಿ ಕ್ರಯ ಪತ್ರ ಪಡೆಯಲು ವ್ಯವಸ್ಥೆ ಮಾಡಿಕೊಂಡಿದ್ದ ಬಗ್ಗೆ ನನಗೆ ತಿಳಿದಿಲ್ಲ. ದಾವಾ ಸರ್ವೆ ನಂಬರ್ 42 ರಲ್ಲಿ ಒಟ್ಟು ಎಷ್ಟು ಎಕರೆ ಇರುತ್ತದೆ ನನಗೆ ತಿಳಿದಿಲ್ಲ. ನಿಪಿ 3 ಹಾಗೂ ನಿಪಿ 4 ರಲ್ಲಿ ಕ್ರಯ ಪತ್ರ ಪಡೆಯಲು ವಾದಿ ಹಾಗೂ ಪ್ರತಿವಾದಿ ಏನು ವ್ಯವಸ್ಥೆ ಮಾಡಿಕೊಳ್ಳಬೇಕು ಎಂದು ನಮೂದು ಇರುತ್ತದೆ. ಅದರಂತೆ ದಾವಾ ಸ್ವತ್ತಿನ ನಕ್ಷೆ, ಬ್ಯಾಂಕಿನ ಸಾಲ ತೀರುವಳಿ ಪತ್ರಗಳನ್ನು ಕರೀಂ ಸಾಬ್ ರವರು ಪಡೆಯಬೇಕಿತ್ತು. ಸದರಿ ನಿಬಂಧನೆಗಳನ್ನು ಪೂರೈಸಿ ಪ್ರತಿವಾದಿಯರು ವಾದಿಯರಿಗೆ ನೋಟೀಸು ನೀಡಿದ ಬಗ್ಗೆ ನನಗೆ ತಿಳಿದಿಲ್ಲ.

7. ಹುಣಸೆಕಟ್ಟೆ ಗ್ರಾಮದ ಸರ್ವೆ ನಂಬರ್ 17/2 ರಲ್ಲಿ ವಾದಿಗೆ 2 ಎಕರೆ ಜಮೀನು ಇರುತ್ತದೆ ಎಂದರೆ ಸರಿ. ಅದರಂತೆ ಸರ್ವೆ ನಂಬರ್ 6 ಮತ್ತು 7 ರಲ್ಲಿ ತಲಾ 20 ಗುಂಟೆ ಜಮೀನು 2 ನೇ ವಾದಿಯ ಹೆಸರಿಗೆ ಇರುತ್ತದೆ ಎಂದರೆ ಸರಿ. ಅದರಂತೆ ಸರ್ವೆ ನಂಬರ್ 29 ರಲ್ಲಿ 20 ಗುಂಟೆ ಹಾಗೂ 29 ಗುಂಟೆ ಜಮೀನು ವಾದಿಯವರ ಕುಟುಂಬಕ್ಕೆ ಇರುತ್ತದೆ ಎಂದರೆ ನನಗೆ ತಿಳಿದಿಲ್ಲ. ಸರ್ವೆ ನಂಬರ್ 42 ರಲ್ಲಿ 1 ಎಕರೆ ಜಮೀನು 1 ನೇ ವಾದಿಯ ಹೆಸರಿಗೆ ಇರುತ್ತದೆ ಎಂದರೆ ನನಗೆ ತಿಳಿದಿಲ್ಲ. ಅದರಂತೆ ಸರ್ವೆನಂಬರ್ 40/120 ರಲ್ಲಿ 36 ಗುಂಟೆ ಜಮೀನು 1 ನೇ ವಾದಿಯ ಹೆಸರಿಗೆ ಇರುತ್ತದೆ ಎಂದರೆ ನನಗೆ ತಿಳಿದಿಲ್ಲ.

8. ದಾವಾ ಸ್ವತ್ತನ್ನು ಖರೀದಿಸಲು ವಾದಿಯರು ಎಂದೂ ತಯಾರು ಇರಲಿಲ್ಲ ಎಂದರೆ ಸರಿಯಲ್ಲ. ಆ ಕಾರಣ ದಿಃ 9-11-2017 ರ ಪೂರ್ವದಲ್ಲಿ ಯಾವುದೇ ನೋಟೀಸು ನೀಡಿಲ್ಲ ಎಂದರೆ ಸರಿಯಲ್ಲ. ಕರಾರಿನಂತೆ ದಿಃ 18-1-2017 ರ ಒಳಗೆ ವಾದಿಯರು ಕ್ರಯ ಪತ್ರ ಪಡೆಯಬೇಕಿತ್ತು ಎಂದರೆ ನನಗೆ ತಿಳಿದಿಲ್ಲ. ವಾದಿಯರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಈಗಲೂ ಪ್ರತಿವಾದಿಯರೇ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ವಾದಿಯರು ಪ್ರತಿವಾದಿಯರ ಸ್ವಾಧೀನಕ್ಕೆ ಅಡ್ಡಿ ಪಡಿಸುತ್ತಿರುತ್ತಾರೆ ಎಂದರೆ ನನಗೆ ತಿಳಿದಿಲ್ಲ. ಈಗಲೂ ವಾದಿಯರು ಪ್ರತಿವಾದಿಯರ ದಾವಾ ಸ್ವತ್ತಿನ ಸ್ವಾಧೀನಕ್ಕೆ ಅಡ್ಡಿ ಪಡಿಸುತ್ತಿರುತ್ತಾರೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆ ಇಲ್ಲ.</u>**

*(ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)*

***ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.***

***(ಟಿ.ಶ್ರೀಕಾಂತ್)***
***ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,***
***ಭದ್ರಾವತಿ.***